# ಬಾಲ್ಯ ನೆನಪಿಸುವ ನಾಣ್ಯಗಳು



ಈ ಚಿತ್ರದಲ್ಲಿ ಕಾಣಿಸುತ್ತಿರುವುದು ಏನು? ಈ ಪ್ರಶ್ನೆಯನ್ನು ಇಂದಿನ ಮಕ್ಕಳಿಗೆ ಕೇಳಿದರೆ, ಉತ್ತರ ಸಿಗುವುದೇ ಇಲ್ಲ. ಏಕೆಂದರೆ ಅವರಿಗೆ ಹಿಂದಿನ ಕಾಲದ ನಾಣ್ಯಗಳ ಬಗ್ಗೆ ಅಷ್ಟಾಗಿ ಗೊತ್ತಿಲ್ಲ. ಆದರೆ ಈ ನಾಣ್ಯಗಳನ್ನು ನೋಡಿದಾಗ ನಮಗೆ ನಮ್ಮ ಬಾಲ್ಯ ನೆನಪಾಗುತ್ತದೆ. ನಮ್ಮ ಪೋಷಕರು ನಮಗೆ 'ಪಾಕೆಟ್ ಮನಿ' ಎಂದು ಕೊಡುತ್ತಿದ್ದ ನಾಣ್ಯಗಳೇ ಇವು. ಐದು ಪೈಸೆಗೆ ಒಂದು ಚಾಕೊಲೇಟ್ ಬರುತ್ತಿತ್ತು, ಇಪ್ಪತ್ತೈದು ಪೈಸೆಗೆ ಎರಡು ಇಡ್ಲಿ ಬರುತ್ತಿತ್ತು, ಒಂದೂರಿನಿಂದ ಒಂದೂರಿಗೆ ಪ್ರಯಾಣ ದರ ಐವತ್ತು ಪೈಸೆ ಇರುತ್ತಿತ್ತು. ಮೊಬೈಲ್ ಬಂದ ಮೇಲೆ ನೋಟು, ಚಿಲ್ಲರೆ ಕಾಣಿಸುವುದು ಕಡಿಮೆಯಾಗಿದೆ. ಈಗಿನ ಮಕ್ಕಳು ಹಳೆಯ ಕಾಲದ ನಾಣ್ಯಗಳನ್ನು ನೋಡಿಲ್ಲ. ಅಂತೆಯೇ ಮುಂದಿನ ಪೀಳಿಗೆಯ ಮಕ್ಕಳಿಗೆ ಕಾಗದದ ನೋಟುಗಳೂ ಕಣ್ಮರೆಯಾಗಬಹುದೇನೋ ಗೊತ್ತಿಲ್ಲ. ಹಿಂದಿನ ಕಾಲದ ನಾಣ್ಯಗಳು ಹಾಗೂ ನೋಟುಗಳನ್ನು ಮುಂದಿನ ಪೀಳಿಗೆಗೆ ತೋರಿಸಲು ತೆಗೆದಿಡಿ.

—ವೀಣಾ ಶಂಕರ್, ಬೆಂಗಳೂರು



# ತೇವಾಂಶ ಉಳಿಸುವ ವಿಧಾನ

ಸಹಜವಾಗಿ ನೀರಿನ ಹರಿವು ಇರುವ ತೋಟಗಳಲ್ಲಿ ಕಾಲುವೆಗೆ ಅಡ್ಡಲಾಗಿ ತಡೆಯನ್ನು ಕಟ್ಟಿ ನೀರು ನಿಲ್ಲಿಸುವ ಕ್ರಮವು ಮೊದಲಿನಿಂದ ರೂಢಿಯಲ್ಲಿದೆ. ಇದರಿಂದ ತೋಟವು ಬೇಸಿಗೆ ದಿನಗಳಲ್ಲಿ ಒಣಗದೇ ಹಸಿರಾಗಿ ಉಳಿಯುತ್ತದೆ. ಚಿತ್ರದಲ್ಲಿ ಕಾಣುತ್ತಿರುವುದು ಮೂರ್ನಾಲ್ಕು ತಿಂಗಳುಗಳಿಗಾಗಿ ನೀರನ್ನು ನಿಲ್ಲಿಸುವ ತಾತ್ಕಾಲಿಕ ಒಡ್ಡು. ಯಾವುದೇ ಖರ್ಚು ಇಲ್ಲದೆ ತೋಟದ ತೇವಾಂಶವನ್ನು ಸಮತೋಲನವಾಗಿಟ್ಟುಕೊಳ್ಳುವ ಸರಳ ವಿಧಾನ ಇದಾಗಿದೆ.

ತೋಟದಲ್ಲೇ ಲಭ್ಯವಿರುವ ಅಡಿಕೆ ಮರದ ಒಣಗಿದ ದಬ್ಬೆ ನಿಲ್ಲಿಸಿ, ಅದಕ್ಕೆ ಮಣ್ಣು ತುಂಬುವುದು ಅಥವಾ ಮರಳು ತುಂಬಿದ ಚೀಲಗಳನ್ನು ಕಾಲುವೆಗೆ ಅಡ್ಡಲಾಗಿ ಇಡುವುದು ಈ ವಿಧಾನದ ಮಾದರಿ. ಹೀಗೆ ಮಾಡುವುದರಿಂದ ಬಿರು ಬೇಸಿಗೆಯಲ್ಲೂ ತೋಟವು ತೇವಾಂಶದಿಂದ ಕೂಡಿರುತ್ತದೆ. ಇದು ರೈತರ ಪಾರಂಪರಿಕ ನೀರಾವರಿ ಪದ್ಧತಿಯಾಗಿದ್ದು, ಈ ವಿಧಾನದಿಂದ ಇಳುವರಿಯೂ ಹೆಚ್ಚುತ್ತದೆ. ಈ ವ್ಯವಸ್ಥೆಯನ್ನು ಎಲ್ಲ ರೈತರೂ ಅಳವಡಿಸಿಕೊಂಡರೆ ಹಾಗೂ ಮಳೆಗಾಲದಲ್ಲಿ ಜಮೀನುಗಳಲ್ಲಿ ಹೆಚ್ಚಿನ ನೀರು ಇಂಗುವಂತೆ ಮಾಡಿದರೆ ನೀರೆತ್ತುವ ಪಂಪ್, ಹನಿ ನೀರಾವರಿ ಮೊದಲಾದ ಸುಧಾರಿತ ನೀರುಣಿಸುವ ಕೆಲಸಗಳ ಮೇಲೆ ಅವಲಂಬನೆಯಾಗುವುದನ್ನು ಕಡಿಮೆ ಮಾಡಬಹುದು.

—ಅರ್ಚನಾ ಬೊಮ್ನಳ್ಳಿ, ಶಿರಸಿ

# ಅಂದದ ಅಮರಿಲ್ಲಿಸ್

ಇದು ಅಮರಿಲ್ಲಿಸ್ ಹೂವು. ಸಾಗರ ತಾಲ್ಲೂಕಿನ ಕಲ್ಮಕ್ಕಿ ಹಳ್ಳಿಯಲ್ಲಿರುವ ಅಕ್ಕನ ಮನೆಯ ಹೂದೋಟದಲ್ಲಿ ಇದು ಸುಂದರವಾಗಿ ಅರಳಿತ್ತು. ಈ ಹೂವಿನ ಆವಾಸ ಸ್ಥಾನ ದಕ್ಷಿಣ ಆಫ್ರಿಕಾ ಹಾಗೂ ಬ್ರೆಜಿಲ್. ಬಿಳಿ, ಗುಲಾಬಿ, ಕೆಂಪು, ಕಿತ್ತಳೆ ಹೀಗೆ ವಿವಿಧ ಬಣ್ಣಗಳಲ್ಲಿ ಹೂವು ಸೊಗಸಾಗಿ ಅರಳುತ್ತದೆ. 4 ರಿಂದ 8 ಇಂಚು ಅಗಲವಾಗಿ ಹೂವು ಅರಳುತ್ತದೆ. 'ಅಮರಿಲ್ಲಿಸ್' ಅನ್ನೋದು ಗ್ರೀಕ್ ಪದ.

—ಸಂಜ್ಞಾ ಭಟ್, ಶಿರಸಿ

